# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.1104/2025

| | | |
|---|---|---|
| ಸಾಕ್ಷಿದಾರರ ಹೆಸರು | : ಚಂದ್ರಶೇಖರ್ ಎ.ಎಂ. | ಫ್ರಾಸಾ-3 |
| ತಂದೆಯ ಹೆಸರು | : ಮುನಿವೆಂಕಟಪ್ಪ | ಚಾಸಾ-1 |
| ವಯಸ್ಸು | : 29 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ. | ದಿನಾಂಕಃ 29.12.2025. |
| ವಾಸಸ್ಥಳ | : ಕಳಸ ಪೋಲಿಸ್ ಠಾಣೆ. | |

**:ಮುಖ್ಯ ವಿಚಾರಣೆಃ ಫ್ರಾಜ್ಞ್ಯಾ.ಸ.ಸ.ಅ. ರವರಿಂದ:**

ನಾನು ದಿ.20.08.2024 ರಿಂದ 14.02.2025 ರವರೆಗೂ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ತನಿಖಾ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.17.01.2025 ರಂದು ಮ.3.15 ರ ಸಮಯಕ್ಕೆ ನಾನು ಠಾಣೆಯಲ್ಲಿರುವಾಗ ಮಾಕೋನಹಳ್ಳಿ ವಾಸಿ 1 ನೇ ಆರೋಪಿಯು ತನ್ನ ಮನೆಗೆ ಹೊಂದಿಕೊಂಡಿದ್ದ ಅಂಗಡಿಯಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ಸ್ವ ಪಿರ್ಯಾದು ತಯಾರಿಸಿ, ಮೊಕದ್ದಮೆ ಸಂಖ್ಯೆ-6/2025 ರಂತೆ ಪ್ರಥಮ ವರ್ತಮಾನ ವರದಿ ದಾಖಲಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಠಾಣೆಯಲ್ಲಿ ಶೋಧನಾ ಸಮುಚ್ಚಿತ ಆಧಾರ ತಯಾರಿಸಿಕೊಂಡು ಚಾಸಾ-4 ರಿಂದ 7 ರವರೊಂದಿಗೆ ಠಾಣೆಯಿಂದ ಹೊರಟು ಮಾಕೋನಹಳ್ಳಿ ಗ್ರಾಮಕ್ಕೆ ತಲುಪಿ, ಅಲ್ಲಿ ಸರ್ಕಲ್ ನಲ್ಲಿ ಹಾಜರುಸಿಕ್ಕ ಚಾಸಾ-2 ಮತ್ತು ಚಾಸಾ-3 ರವರನ್ನು ನಿಯಮನುಸಾರ ಪಂಚರನ್ನಾಗಿ ನೇಮಕ ಮಾಡಿಕೊಂಡು ಅವರನ್ನು ನಮ್ಮೊಂದಿಗೆ ಕರೆದುಕೊಂಡು ಮಾಕೋನಹಳ್ಳಿಯ ನಾಗಲಪುರದಲ್ಲಿರುವ 1 ನೇ ಆರೋಪಿಯ ಅಂಗಡಿಯ ಬಳಿ ತಲುಪಿ ಅಲ್ಲಿದ 1 ನೇ ಆರೋಪಿಯನ್ನು ಅವರ ಹೆಸರು ಮತ್ತು ವಿಳಾಸ ವಿಚಾರಿಸಿದ ನಂತರ ಅಂಗಡಿಯನ್ನು ಶೋಧನೆ ಮಾಡಿದಾಗ ಅಂಗಡಿಯೊಳಗೆ ಒಂದು ಪ್ಲಾಸ್ಟಿಕ್ ಚೀಲದಲ್ಲಿ 90 ಎಂ ಎಲ್ ನಷ್ಟು ಮದ್ಯ ತುಂಬಿದ್ದ ಡಿಲೆಕ್ಸ್ ವಿಸ್ಕಿಯ 44 ಪ್ಯಾಕೆಟುಗಳು ಇದ್ದವು. ಸದರಿ ವಸ್ತುಗಳ ಬಗ್ಗೆ 1 ನೇ ಆರೋಪಿಯನ್ನು ಕೇಳಿದಾಗ ಮದ್ಯ ಮಾರಾಟ ಮಾಡಿ ಹಣಗಳಿಸುವ ಉದ್ದೇಶದಿಂದ ಮದ್ಯದ ವಸ್ತುಗಳನ್ನು ಇಟ್ಟುಕೊಂಡಿದ್ದು ಈ ಸಂಬಂಧ ಯಾವುದೇ ಪರವಾನಿಗೆ ಇಲ್ಲ ತಿಳಿಸಿರುತ್ತಾರೆ.

ನಂತರ ಪಂಚರ ಸಮಕ್ಷಮ 1 ನೇ ಆರೋಪಿಯ ವಶದಲ್ಲಿ ಸಿಕ್ಕ ಮದ್ಯದ ಪಾಕೆಟುಗಳನ್ನು ಚೀಲದೊಂದಿಗೆ ನಿಯಮಾನುಸಾರ ಸೀಲು ಮಾಡಿ, ವಶಕ್ಕೆ  ಪಡೆದು ಸ.4.10 ರಿಂದ 5.15 ಗಂಟೆಯವರೆಗೂ ಮಹಜರು ಕ್ರಮ ಜರುಗಿಸಿ ಸ್ಥಳದಲ್ಲಿ ಪೋಟೋಗಳನ್ನು ತೆಗೆಯಿಸಲಾಯಿತು. ನಂತರ 1 ನೇ ಆರೋಪಿ ಮತ್ತು ಮುದ್ದೆಮಾಲುಗಳೊಂದಿಗೆ ಠಾಣೆಗೆ ಹಾಜರಾಗಿ ಮುದ್ದೆಮಾಲುಗಳನ್ನು ಠಾಣಾ ಮಾಲು ಪಟ್ಟಿ ಸಂ.7/2025 ಕ್ಕೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ದಾಳಿ ಕಾಲಕ್ಕೆ ತೆಗೆದ ವೀಡಿಯೋ ಚಿತ್ರೀಕರಣವನ್ನು ಸಿಡಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಯು ದಿ.17.01.2025 ರ ಸ್ವ ಪಿರ್ಯಾದು, ಪ್ರಥಮ ವರ್ತಮಾನ ವರದಿ, ಶೋಧನಾ ಸಮುಚ್ಚಿತ ಆಧಾರವನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಗಳನ್ನು ನಿಪಿ-8 ರಿಂದ 10, ಸಾಕ್ಷಿಯ

ಸಹಿಗಳನ್ನು ನಿಪಿ-8(ಎ) ರಿಂದ 10(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-1 ರ ಮಹಜರ್ ಮತ್ತು ನಿಪಿ-5 ರ ಪ್ರಮಾಣಪತ್ರದಲ್ಲಿ ತಮ್ಮ ಸಹಿಗಳನ್ನು ಗುರುತಿಸಿ, ನಿಪಿ-2 ಮತ್ತು 3 ರ ಫೋಟೋಗಳನ್ನು ಮಹಜರ್ ಕಾಲಕ್ಕೆ ತೆಗೆದ ಬಗ್ಗೆ ಹಾಗೂ ಎಂ.ಒ.1 ಮತ್ತು 2 ರ ವಸ್ತುಗಳನ್ನು ಈ ದಿನ ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯಿಂದ ವಶಕ್ಕೆ ಪಡೆದ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಗಳನ್ನು ನಿಪಿ-1(ಸಿ), 5(ಎ) ಮತ್ತು ಎಂ.ಒ.1(ಸಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎಸ್.ಡಿ. ವಕೀಲರಿಂದಃ**

1 ನೇ ಆರೋಪಿಗೆ ಸೇರಿತ್ತು ಎಂದು ಹೇಳಲಾದ ಅಂಗಡಿಗೆ ಹೆಸರು ಇತ್ತ ಎಂದು ನಾನು ನೋಡಿಲ್ಲ. ಮುದ್ದೆಮಾಲುಗಳು ಅಂಗಡಿಯ ಒಳಭಾಗದಲ್ಲಿ ಇತ್ತು. ಆ ಸ್ಥಳದ ಫೋಟೋ ತೆಗೆಯಲಾಗಿದೆ. ಎಂ.ಒ.1 ರ ಪ್ಲಾಸ್ಟಿಕ್ ಚೀಲ ನಿಪಿ-2 ಮತ್ತು 3 ರ ಫೋಟೋಗಳಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ಎಂ.ಒ.2 ರ ಪ್ಯಾಕೇಟ್ ಗಳು ಸಹಾ ಸದರಿ ಫೋಟೋಗಳಲ್ಲಿ ಕಾಣುತ್ತಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವುಗಳನ್ನು ಸೀಲು ಮಾಡಲಾಗಿದೆ ಎಂದು ನುಡಿಯುತ್ತಾರೆ. ಮುದ್ದೆಮಾಲುಗಳನ್ನು ಸೀಲು ಮಾಡುವ ಮುನ್ನ ಅದರ ಪ್ರತ್ಯೇಕ ಫೋಟೋ ತೆಗೆಯಲಾಗಿಲ್ಲ. ಮದ್ಯದ ಪ್ಯಾಕೇಟ್ ಗಳ ಮೇಲಿನ ಮುಖಬೆಲೆಯನ್ನು ಮಹಜರ್ ನಲ್ಲಿ ನಮೂದಿಸಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿದ್ದಾಗ 1 ನೇ ಆರೋಪಿ ಮದ್ಯ ಮಾರಾಟ ಮಾಡುತ್ತಿದ್ದದ್ದು ಕಾಣಲಿಲ್ಲ. ನಾನು ಹೇಳಿದ ಸ್ಥಳದಲ್ಲಿ ಬೇರೆ ಜನರು ಇರಲಿಲ್ಲ. ಎಂ.ಒ.2 ರ ಪ್ಯಾಕೇಟ್ ಗಳನ್ನು ತಯಾರು ಮಾಡಿದ ಕಂಪೆನಿಯ ಹೆಸರನ್ನು ಮಹಜರ್ ನಲ್ಲಿ ಬರೆಯಲಾಗಿಲ್ಲ. 1 ನೇ ಆರೋಪಿಗೆ ಸೇರಿದ ಅಂಗಡಿಯ ವ್ಯಾಪಾರ ಪರವಾನಗೆಯ ಬಗ್ಗೆ ಪರಿಶೀಲಿಸಿದ್ದು ಆ ರೀತಿ ಪರವಾನಗೆ ಇಲ್ಲ ಎಂದು ಆರೋಪಿ ತಿಳಿಸಿದ್ದರು.

ನಿಪಿ-2 ಮತ್ತು 3 ರಲ್ಲಿ ಇರುವ ವಸ್ತುಗಳು ಎಂ.ಒ.1 ಮತ್ತು 2 ರ ಮಾಲುಗಳಲ್ಲ ಎಂದರೆ ಸರಿಯಲ್ಲ. ಸದರಿ ಫೋಟೋಗಳನ್ನು ತಂತ್ರಜ್ಞಾನದಿಂದ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಸ್ಥಳಕ್ಕೆ ಹೋಗಿಲ್ಲ, ಯಾವುದೇ ದಾಳಿ ಮಾಡಿಲ್ಲ ಹಾಗೂ 1 ನೇ ಆರೋಪಿಯಿಂದ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮದ್ಯದ ಅಂಗಡಿಗಳಲ್ಲಿ ಸಿಗುವ ಖಾಲಿ ಪ್ಯಾಕೇಟ್ ಗಳನ್ನು ಉಪಯೋಗಿಸಿಕೊಂಡು ಪ್ರಕರಣಕ್ಕೋಸ್ಕರ ಉಪಯೋಗಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ವಶಕ್ಕೆ ಪಡೆದು ನೋಟೀಸು ಜಾರಿ ಮಾಡಿ ವಶಕ್ಕೆ ಪಡೆದಿದ್ದೇವೆ ಎಂದರೆ ಸರಿಯಲ್ಲ. ನಾನು ಗುರುತಿಸಿರುವ ಎಲ್ಲಾ ದಾಖಲೆಗಳನ್ನು ಠಾಣೆಯಲ್ಲಿಯೇ ಸೃಷ್ಟಿಸಿಕೊಂಡು ಇಲಾಖಲಾ ಅಂಕಿಅಂಶಕ್ಕೋಸ್ಕರ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ, ಈ ಪ್ರಕರಣಕ್ಕೂ, ಮುದ್ದೆಮಾಲುಗಳಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಆರೋಪಿ ಪರ ವಕೀಲರು 1 ನೇ ಆರೋಪಿ ಪರ ಆದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.